ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ವಿಷಯ: ಸನ್ಮಾನ್ಯ ಲೋಕಾಯುಕ್ತರ ರಾಜೀನಾಮೆಯಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕರೆ, ನಾನು ನಮ್ಮ..

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿದ ನಂತರ. . . .

ಶ್ರೀ ಸಿದ್ದರಾಮಯ್ಯ: ಅಲ್ಲಾ, ನಾನು ಮಾತನಾಡುವ ಮುಂಚೆಯೇ ನೀವು ಪ್ರಶ್ನೋತ್ತರ ವೇಳೆ ಮುಗಿದ ನಂತರ ಅಂದು ಬಿಟ್ಟರೆ ಹೇಗೆ? ಬಹಳ ಮುಖ್ಯವಾದಂಥ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ರೂಲ್ 60ರ ಅಡಿಯಲ್ಲಿ ನಾನು ಒಂದು adjournment motion notice ಅನ್ನು ಲೋಕಾಯುಕ್ತರ ರಾಜೀನಾಮೆಯಿಂದ ಇವತ್ತು ರಾಜ್ಯದಲ್ಲಿ ಆಗಿರತಕ್ಕಂಥ ಪರಿಸ್ಥಿತಿ ಬಗ್ಗೆ ಕೊಟ್ಟಿದ್ದೇನೆ. ಅದರ ಬಗ್ಗೆ ಸಾರ್ವಜನಿಕರ ಮನಸ್ಸಿನಲ್ಲಿ ಆಗಿರತಕ್ಕಂಥ ಅನಿಸಿಕೆಗಳು, ಸರ್ಕಾರದಿಂದ ಆಗತಕ್ಕಂಥ ಪರಿಣಾಮ ಇವೆಲ್ಲದರ ಬಗ್ಗೆ ಚರ್ಚೆಯನ್ನು ಮಾಡಬೇಕು. ಇದು ಅತ್ಯಂತ ಸಾರ್ವಜನಿಕವಾಗಿರತಕ್ಕಂಥ ವಿಚಾರ. ಅವರು 23ನೇ ತಾರೀಖಿನಿಂದ ರಾಜೀನಾಮೆಯನ್ನು ಕೊಟ್ಟರು 24ನೇ ತಾರೀಖಿನಿಂದ ನೀವು ಸಾರ್ವಜನಿಕರ ಅಭಿಪ್ರಾಯಗಳು, ಮಾಧ್ಯಮಗಳ editorials, ವಕೀಲರ ಅಭಿಪ್ರಾಯಗಳು, Advocate General ರವರ ಅಭಿಪ್ರಾಯಗಳು, ಮಾಜಿ ನ್ಯಾಯಾಧೀಶರುಗಳ ಅಭಿಪ್ರಾಯಗಳನ್ನು ಬಹುಶ: ತಾವು ನೋಡಿರುತ್ತೀರಿ.

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೋತ್ತರ ವೇಳೆ ಎಂದು ಪ್ರಾರಂಭ ಮಾಡಿದಿರಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಬಚ್ಚೇಗೌಡರೆ, ತಾವು ಆಮೇಲೆ ಮಾತನಾಡಿ.

ಶ್ರೀ ಬಿ. ಎನ್. ಬಚ್ಚೇಗೌಡ : ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಬಚ್ಚೇಗೌಡರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿರುತ್ತೀರಾ? ಮಾನ್ಯ ಬಚ್ಚೇಗೌಡರೇ, ನೀವು ಸೀನಿಯರ್ ಲಾಯರ್, ಈ ರೀತಿ ಆದರೆ ಹೇಗೆ? ನೀವು ನಮ್ಮ ಕಡೆ ಮೆಂಬರ್ ಆಗಿದ್ದಾಗ ನಮ್ಮ ಜೊತೆ ಬಹಳ ಚೆನ್ನಾಗಿ ಇದ್ದಿರಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ಕರೆಕ್ಟಾಗಿದೆ. ಇವತ್ತು ಅಧಿವೇಶನದ First day. ನೀವು ಖಂಡಿತವಾಗಿ ಮಾತನಾಡಿ. ಅದು ಒಳ್ಳೆಯದು, ಅದರ ಬಗ್ಗೆ ಚರ್ಚೆಯಾಗಲಿ. ಮೊದಲು ಪ್ರಶ್ನೋತ್ತರವಾಗಲಿ.

ಅಧ್ಯಕ್ಷರು: ಪ್ರಶ್ನೋತ್ತರವಾದ ಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಪ್ರಶ್ನೋತ್ತರ ವೇಳೆ ಆದ ತಕ್ಷಣ ಅವರು ಪ್ರಸ್ತಾಪ ಮಾಡಲಿ.

ಶ್ರೀ ಸಿದ್ದರಾಮಯ್ಯ: ಇದೇನು ಹೊಸ ಸಂಪ್ರದಾಯ ಅಲ್ಲ. ಈ ಸದನದಲ್ಲಿ ಅನೇಕ ಸಾರಿ ಅಜೆಂಡಾದಲ್ಲಿ ಇರುವ ಎಲ್ಲಾ ವಿಚಾರವನ್ನು ಬದಿಗೊತ್ತಿ ಚರ್ಚೆ ಮಾಡಿರುವಂಥ ಅನೇಕ ನಿದರ್ಶನಗಳು ಇಲ್ಲಿವೆ. ರೂಲ್ ಅಡಿಯಲ್ಲಿಯೇ ತೆಗೆದುಕೊಂಡಿರತಕ್ಕಂಥ ವಿಷಯಗಳು ಇಲ್ಲಿವೆ.

ಅಧ್ಯಕ್ಷರು: ನಾನು ಇಲ್ಲವೆಂದು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ: When such being the case, ಮಾನ್ಯ ಮಂತ್ರಿಗಳು ಅದನ್ನು ಅಡ್ಡಿಪಡಿಸುತ್ತಿರುವುದು ಸರಿಯಾದ ಕ್ರಮದಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ರೀತಿ ಮಧ್ಯದಲ್ಲಿ ಅವರು ಮಾತನಾಡಿದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್: ನಾನು ಅಡ್ಡಿಪಡಿಸುತ್ತಿದ್ದೇನೆಂದು ಅಂದುಕೊಳ್ಳಬೇಡಿ. ಮಾನ್ಯ ಅಧ್ಯಕ್ಷರಲ್ಲಿ ನನ್ನ ಒಂದು ಮನವಿ.

ಶ್ರೀ ಸಿದ್ದರಾಮಯ್ಯ: ನೋಡಿ, ನಾನು ಮಾತನಾಡುವಾಗ ಒಂದು ಮನವಿ ಎಂದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್: ನಾನು ನಿಮ್ಮ subject ಬಗ್ಗೆ ಮಾತನಾಡುತ್ತಿಲ್ಲ. ಒಂದು ನಿಮಿಷ.

ಶ್ರೀ ಸಿದ್ದರಾಮಯ್ಯ: ಈಗ ನೀವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಾ? ಏನಿದು? ಈ ರೀತಿ ಮಾತನಾಡಿದರೆ ಹೇಗೆ? I don't understand ?

Sri Suresh Kumar: At any time, ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಲ್ಲವೆ?

ಶ್ರೀ ಸಿದ್ದರಾಮಯ್ಯ: ನೀವು ಸಂಸದೀಯ ವ್ಯವಹಾರಗಳ ಸಚಿವರು

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಕೂಡ ಹಿರಿಯರು, ಉಪ ಮುಖ್ಯಮಂತ್ರಿಗಳು ಆಗಿದ್ದವರು.

ಶ್ರೀ ಸಿದ್ದರಾಮಯ್ಯ : That's why I am requesting the Speaker to take up the issue.

ಅಧ್ಯಕ್ಷರು: ನಾನು ಒಂದು ವಿನಂತಿಯನ್ನು ಮಾಡುತ್ತೇನೆ. ದಿನಾಂಕ: 20,21 ರಲ್ಲಿ All India Presiding Officers' Conferenceನಲ್ಲಿ ಒಂದು ನಿರ್ಣಯ ಕೂಡ ಕೈಗೊಂಡಿದ್ದೇವೆ. ಯಾವುದೇ ಕಾರಣಕ್ಕೂ ಪ್ರಶ್ನೋತ್ತರವನ್ನು ಮುಂದೂಡಬಾರದು, ಯಾವುದೇ ಒಂದು ವಿಷಯ ಬಹಳ ಗಹನವಾಗಿದ್ದರೆ ಅದನ್ನು ಪ್ರಶ್ನೋತ್ತರವಾದ ಮೇಲೆಯೇ ತೆಗೆದುಕೊಳ್ಳಬೇಕೆಂದು ಚರ್ಚೆ ಆಗಿದೆ. ಈ ಬಗ್ಗೆ ಎಲ್ಲಾ ಸಭಾಧ್ಯಕ್ಷರುಗಳು ಮತ್ತು ಮಾನ್ಯ ಸಭಾಪತಿಗಳು ಸಹಮತವನ್ನು ಕೊಟ್ಟಿದ್ದಾರೆ. ಹಾಗಾಗಿ ಅದಕ್ಕೆ ಒಂದು ಗೌರವವನ್ನು ಕೊಟ್ಟು ಪ್ರಶ್ನೋತ್ತರವನ್ನು ನಡೆಸೋಣ. ಅನೇಕ ಸದಸ್ಯರು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅದರಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎಂದು ಇಲ್ಲ ಕ್ಷೇತ್ರಕ್ಕೆ ಸಂಬಂಧಪಟ್ಟ ಅನೇಕ ವಿಚಾರಗಳು ಇವೆ, ಅದನ್ನು ಮುಗಿಸಿ ಆದ ತಕ್ಷಣ ತಾವು ಈ ಬಗ್ಗೆ ಪ್ರಸ್ತಾಪ ಮಾಡಿ ನಾನು ತಮಗೆ ಅವಕಾಶವನ್ನು ಕೊಡುತ್ತೇನೆ, ತಾವು ಸಹಕರಿಸಬೇಕು ಎಂಬ ವಿನಂತಿ ಇದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರದೇ ಹೋದರೆ ಈ ಸದನದಲ್ಲಿ ಏನೂ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ತಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ಹೇಳಿಲೇ ಇಲ್ಲ Please, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಬಚ್ಚೇಗೌಡರೆ, ನೀವು ನಮ್ಮ ಜೊತೆಯಲ್ಲಿ ಕೆಲಸ ಮಾಡಿದವರಾಗಿದ್ದು, ನೀವು ಆಗ ಈ ರೀತಿ ಇದ್ರಾ? ಆಗ ತಾವು ಈ ರೀತಿ ಇರಲಿಲ್ಲ, ಈಗ ಯಾಕೆ ತಾವು ಅಲ್ಲಿಗೆ ಹೋದ ಮೇಲೆ ಹೀಗೆ ಆಗಿದ್ದೀರಿ?

ಶ್ರೀ ಬಚ್ಚೇಗೌಡ: ಪ್ರಶ್ನೋತ್ತರ ಆದ ಮೇಲೆ ತಾವು ಮಾತನಾಡಿದರೆ ಏನೂ ಕಳೆದುಕೊಳ್ಳುವುದಿಲ್ಲ. ಈಗ ಮಾತನಾಡುವುದು ಏನು ಇದೆ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಆದ ಮೇಲೆ ಅವರು ಮಾತನಾಡಲಿ. ಏನು ವ್ಯತ್ಯಾಸ ಆಗುತ್ತದೆ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅವರಿಗಾದರೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಇಲ್ಲವಾದರೆ ನನಗಾದರೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ತಾವು ಯಾವುದಾದರೂ ಒಂದನ್ನು ಮಾಡಿದರೆ ಒಳ್ಳೆಯದು. ಇಲ್ಲಾ ಅವರು ನಿಂತುಕೊಳ್ಳುವುದು, ನಾನು ನಿಂತುಕೊಳ್ಳುವುದು ಎಂದರೆ, this is not correct.

ಅಧ್ಯಕ್ಷರು: ನನ್ನ ಕಳಕಳಿಯೂ ಅದೇ ಇದೆ. ತಾವು ಪ್ರಶ್ನೋತ್ತರ ಆದ ಮೇಲೆ ಪ್ರಸ್ತಾಪವನ್ನು ಮಾಡಿ.

ಶ್ರೀ ಸಿದ್ದರಾಮಯ್ಯ: ನಾನು ತಮಗೆ ಹೇಳುತ್ತೇನೆ. ತಾವು ನಂತರ ಈ ಬಗ್ಗೆ ತೀರ್ಮಾನ ಮಾಡಿ. Ultimately, you have got every power to take your own decision. But, at the same time, ನಮ್ಮ ಸಂಸದೀಯ ಸಚಿವರು ನಮಗೆ co-operate ಮಾಡಬೇಕು. ಅದಕ್ಕೋಸ್ಕರವೇ ನೀವು ಇಲ್ಲಿರುವುದು. ನೀವು ನಮಗೆ ಗೈಡ್ ಮಾಡಬೇಕು, ಅದನ್ನು ಬಿಟ್ಟು ನೀವೇ ಅಡ್ಡಬಂದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಗೈಡ್ ಮಾಡಲು ಬಂದರೆ ತಾವು ಮಿಸ್ ಗೈಡ್ ಮಾಡುತ್ತೀರಾ ಅನುತ್ತೀರಲ್ಲಾ? ನಾನು ಗೈಡೇ ಮಾಡುತ್ತಿರುವುದು.

ಶ್ರೀ ಸಿದ್ದರಾಮಯ್ಯ: ಇಲ್ಲ, ನಾವು ಆ ರೀತಿ ಹೇಳಿಯೇ ಇಲ್ಲ. ನೀವು ಗೈಡ್ ಮಾಡುವುದಾದರೆ ಗೈಡ್ ಮಾಡಿ ಎಂದು ಹೇಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಮಾನ್ಯ ಸಭಾಧ್ಯಕ್ಷರ ಮನವಿಯ ಮೇರೆಗೆ ಗೈಡ್ ಮಾಡುತ್ತಿರುವುದು.

ಶ್ರೀ ಸಿದ್ದರಾಮಯ್ಯ: ಆದರೆ, ನೀವು ಅನೇಕ ಸಾರಿ misguide ಮಾಡಿದ್ದೀರಿ.

ಶ್ರೀ ಎಸ್. ಸುರೇಶ್ ಕುಮಾರ್ : ಯಾರೋದೋ ಗೈಡ್, ಯಾರದೋ ಮಿಸ್ ಗೈಡ್ ಅದಕ್ಕೆ ಏನು ಮಾಡೋಣ?

ಶ್ರೀ ಸಿದ್ದರಾಮಯ್ಯ: ನೋಡಿ, ಇದು misguide, ಆಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಹೌದು.

ಅಧ್ಯಕ್ಷರು: ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಾನು ಹೇಳುವುದನ್ನು ತಾವು ಕೇಳಿಬಿಡಿ. ಅನಂತರ ನೀವು ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ : ಎಷ್ಟು ಹೊತ್ತು ಸ್ವಾಮಿ?

ಅಧ್ಯಕ್ಷರು: ಆಯಿತು, 2 ನಿಮಿಷ ಅವರು ಹೇಳಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಎಷ್ಟು ಹೊತ್ತು? ಅದನ್ನಾದರೂ ತಾವು ಕೇಳಿಬಿಡಿ.

ಶ್ರೀ ಸಿದ್ದರಾಮಯ್ಯ: ಅದಕ್ಕೆ ಟೈಮ್ ನಿಗದಿ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್. ಸುರೇಶ್ ಕುಮಾರ್ : ಹಾಗಾದರೆ ಇವತ್ತಿನ ಪ್ರಶ್ನೋತ್ತರ ವೇಳೆಯು ಏನಾಗುತ್ತದೆ?

ಶ್ರೀ ಸಿದ್ದರಾಮಯ್ಯ: ಇಲ್ಲಾ, ಈ ಬಗ್ಗೆ ನಾನು ಹೇಳುತ್ತೇನೆ. ನೋಡಿ ಈ ತರಹ ಪ್ರಶ್ನೆಗಳನ್ನು ಕೇಳುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಮೊನ್ನೆ ದಿನ

ನಾನು ಪಾರ್ಲಿಮೆಂಟ್‌ನಲ್ಲಿದ್ದೆ. ಬೆಲೆ ಏರಿಕೆಯ ಬಗ್ಗೆ ಇವರ ಪಕ್ಷದವರೇ ಪ್ರಶ್ನೋತ್ತರಗಳನ್ನೆಲ್ಲಾ ಬದಿಗಿಟ್ಟು ಮೂರು ಸಾರಿ ಸದನವನ್ನು adjourn ಮಾಡಿಸಿ, ಕೊನೆಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ತೆಗೆದುಕೊಂಡು ಬಿಟ್ಟರು. ಪ್ರಶ್ನೋತ್ತರ ಟೈಮ್‌ನ್ನು ಅವರಿಗೆ ಅವತ್ತು ಕೊಡಲಿಲ್ಲ. ಪ್ರಶ್ನೆಗಳನ್ನು ಕೇಳುವುದಕ್ಕೆ ಬಿಡಲಿಲ್ಲ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಇದು ಬಹಳ ಮಹತ್ತರವಾದುದು, ಗಹನವಾದುದು ಎಂದು ನೀವು ಹೇಳುತ್ತಿರುವುದು. I hope that you agree with me. ಅತ್ಯಂತ ಪ್ರಾಮುಖ್ಯವಾದುದು, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸಂವಿಧಾನಬದ್ಧವಾದಂತಹ ಒಂದು ಸಂಸ್ಥೆ ಕುಸಿದಾಗ, ಅದರ ಮೇಲೆ ಸರ್ಕಾರಕ್ಕೆ ಗೌರವ ಇಲ್ಲದೇ ಇದ್ದಾಗ, ಇವತ್ತು ರಾಜ್ಯದಲ್ಲಿ ಏನು ಪರಿಸ್ಥಿತಿಯಾಗುತ್ತದೆ, ಕಾನೂನಿನ ಪರಿಸ್ಥಿತಿಯು ಏನಾಗುತ್ತದೆ, ಸಂವಿಧಾನ ಏನಾಗುತ್ತದೆ, Break-down of Constitution ಆಗುತ್ತದೆ. ಇಂತಹ ವಿಚಾರ ಚರ್ಚೆ ಮಾಡಬೇಕಾದಾಗ, ಇಲ್ಲ ಪ್ರಶ್ನೆ ಕೇಳಿ ಎಂದು ಹೇಳುತ್ತೀರಿ. I am also for that. ಪ್ರಶ್ನೆಗಳನ್ನು ಕೇಳಬೇಕು, ನೀವು ಅದಕ್ಕೆ ಉತ್ತರವನ್ನು ಕೊಡಬೇಕು. ಎಲ್ಲಾ ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಉತ್ತರ ಸಿಗಬೇಕು. ರಾಜ್ಯದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಬೇಕು. I am for it. But the question is the issue that I have raised today is very important and very serious issue. ಅದಕ್ಕೆ ತಾವು ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ? ಮಧ್ಯದಲ್ಲಿ ನಿಂತುಬಿಟ್ಟು ಇಲ್ಲಾ ಆಗುವುದಿಲ್ಲ, ಆಮೇಲೆ ಮಾಡಿಕೊಳ್ಳಿ ಎಂದರೆ ಹೇಗೆ? ಆದುದರಿಂದ, ಈ ಬಗ್ಗೆ ಚರ್ಚೆಯನ್ನು ಮಾಡೋಣ. ಆಮೇಲೆ question hourನ್ನು ಕೂಡ ತೆಗೆದುಕೊಳ್ಳೋಣ. ಬೇರೆ ವಿಚಾರಗಳ ಬಗ್ಗೆಯೂ ಕೂಡ ಚರ್ಚೆಯನ್ನು ಮಾಡೋಣ. We will co-operate.

ಅಧ್ಯಕ್ಷರು:ಆಯಿತು, ತಾವು ಈಗ ಹೇಳಿದ್ದೀರಲ್ಲಾ?

ಶ್ರೀ ಸಿದ್ದರಾಮಯ್ಯ : ನಾನು ಹೇಳುವುದಕ್ಕೆ ಬಿಡುವುದಿಲ್ಲವಲ್ಲಾ?

ಶ್ರೀ ಎಸ್. ಸುರೇಶ್ ಕುಮಾರ್ : ಇದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನೀವು ಆಮೇಲೆ ಉತ್ತರವನ್ನು ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : Just a minute.

ಶ್ರೀ ಸಿದ್ದರಾಮಯ್ಯ : You have got every right to speak. By taking the permission of the Chair, you can speak whatever you want to speak.

ಶ್ರೀ ಎಸ್. ಸುರೇಶ್ ಕುಮಾರ್ : But, you think it is your right to shut my mouth.

ಶ್ರೀ ಸಿದ್ದರಾಮಯ್ಯ: No.I don't say that.

ಶ್ರೀ ಎಸ್. ಸುರೇಶ್ ಕುಮಾರ್ : ಒಂದೇ ಒಂದು ನಿಮಿಷ ನಾನು ಮಾತನಾಡುತ್ತೇನೆ. ನೀವು ಒಂದು ಹೇಳಿದರಲ್ಲಾ, ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

Sri Siddramaiah: No it is you. You are representing the Government and you are interfering with my freedom. I am not interfering with his freedom.

ಅಧ್ಯಕ್ಷರು: ಒಂದು ನಿಮಿಷ ಅವರು ಮಾತನಾಡಿ ಮುಗಿಸಲಿ. ಆಯಿತು ಈಗ ಅವರು ಮಾತನಾಡಲಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ನಿಲುವಳಿ ಸೂಚನೆಯ ಬಗ್ಗೆ ಮಾತನ್ನಾಡುತ್ತೇನೆ

ಅಧ್ಯಕ್ಷರು: ಆಯಿತು. ಈಗ ಅವರು ಮಾತನಾಡಲಿ, ನಿಲುವಳಿ ಸೂಚನೆಯ ಬಗ್ಗೆ ಮಾತನಾಡುವುದಕ್ಕೆ ಒಬ್ಬರಿಗೆ ಮಾತ್ರ ಅವಕಾಶವಿದೆ. ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಮಾತ್ರ ಅವಕಾಶವಿದೆ, ಎರಡನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಒಂದೇ ವಿಷಯ ಇರುವುದರಿಂದ ಎರಡು ನಿಲುವಳಿ ಸೂಚನೆಯನ್ನು ತಾವು convert ಮಾಡಿ.

ಅಧ್ಯಕ್ಷರು: ಆಯಿತು. That is a different issue.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಲೋಕಾಯುಕ್ತರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ನಾನು ಮಾತನಾಡುವುದಕ್ಕೆ ಇನ್ನೆಲ್ಲಿಗೆ ಹೋಗಲಿ? ಇಲ್ಲಿ ಬೇರೆ ವಿಚಾರವನ್ನು ಪ್ರಸ್ತಾಪ ಮಾಡಲೆ?

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಸಿದ್ದರಾಮಯ್ಯನವರೆ, ಒಂದು ನಿಮಿಷ ತಾವು yield ಆಗಿ.

ಶ್ರೀ ಸಿದ್ದರಾಮಯ್ಯ : ಮತ್ತೆ ನಾನು ಯಾವ ವಿಚಾರವನ್ನು ಪ್ರಸ್ತಾಪ ಮಾಡಲಿ? ನಾನು ಆ ವಿಚಾರದ ಬಗ್ಗೆಯೇ ಎತ್ತಿರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ: ತಾವು ಒಂದು ನಿಮಿಷ yield ಆಗಿ.

ಶ್ರೀ ಸಿದ್ದರಾಮಯ್ಯ : ಬೇರೆ ವಿಚಾರವನ್ನು ನಾನ್ನು ಏತಕ್ಕಾಗಿ ಎತ್ತಲಿ? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೆ, ತಾವು ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಮ್ಮ ಪ್ರತಿಪಕ್ಷದ ನಾಯಕರು, ಬಹಳ ಗಂಭೀರವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಜ್ಯದಲ್ಲಿ ಬಹುತೇಕ ಕಡೆ ಈ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. Question Hourನ್ನು ಬದಿಗೊತ್ತಿ ಮಹತ್ವದ ವಿಷಯವಾದ ಲೋಕಾಯುಕ್ತರ ಇತ್ತೀಚಿನ ಘಟನಾವಳಿಯ ಬಗ್ಗೆ ತೆಗೆದುಕೊಳ್ಳಬೇಕೆಂದು ಅವರು ಪ್ರಸ್ತಾಪವನ್ನು ಮಾಡುತ್ತಿದ್ದಾರೆ. ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. Last time NICE ವಿಚಾರದ ಬಗ್ಗೆ ಇಲ್ಲಿ ಚರ್ಚೆಯಾಗಲಿಲ್ಲ, ನನಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ ಎಂದು ನಮ್ಮ ರೇವಣ್ಣನವರು ಆರೋಪವನ್ನು ಮಾಡಿದ ವಿಷಯಗಳ ಬಗ್ಗೆ, ನೆರೆ ಸಂತ್ರಸ್ತರ ವಿಷಯದ ಬಗ್ಗೆ, ಈ ರೀತಿಯಾದ ಏನೇನು ಬಹಳ ಪ್ರಾಮುಖ್ಯವಾದ ವಿಷಯಗಳು ಎಂದು ನಿಮಗೆ ಅನಿಸುತ್ತದೆಯೋ ಆ ವಿಷಯಗಳನ್ನು ಈ ಅಧಿವೇಶನದಲ್ಲಿ ಮುಕ್ತವಾಗಿ ಚರ್ಚೆಯಾಗಬೇಕೆಂದು ಈ ಬಗ್ಗೆ ನನ್ನ ಸಂಪೂರ್ಣವಾದ ಸಹಮತವಿದೆ. ಅದಕ್ಕೆ ನಾನು ನಿಮಗೆ ಸಲಹೆಯನ್ನು ಕೊಡುವಂತಹದ್ದು, ಮಾನ್ಯ ಸಭಾಧ್ಯಕ್ಷರು, ಈ ಬಗ್ಗೆ ಒಪ್ಪಿಗೆಯನ್ನು ಕೊಟ್ಟರೆ ಈ ಒಂದೊಂದು ವಿಷಯದ ಬಗ್ಗೆ Question hour ಬಗ್ಗೆ ನಿಮ್ಮ ಕೊಠಡಿಗೆ ಕರೆದು ಚರ್ಚೆಮಾಡಿ ಬದಿಗೊತ್ತಿ ಎರಡೆರಡು

ದಿವಸ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಿ. ಮೊದಲನೆಯ ಒಂದು ವಾರ ಈ ರೀತಿ ರಾಜ್ಯದಲ್ಲಿ ಗಣಿಗಾರಿಕೆಯು ಸೇರಿದಂತೆ ಪ್ರಮುಖವಾದ ವಿಷಯಗಳು ಏನು ಚರ್ಚೆಯಾಗುತ್ತಿದೆ, ಮತ್ತೆ ನಮ್ಮ ಸರ್ಕಾರದ imageಗೆ ಒಂದು ಧಕ್ಕೆ ಬರುವಂತಹ ರೀತಿಯಲ್ಲಿ ವಾತಾವರಣವು ನಿರ್ಮಾಣವಾಗುತ್ತಿದೆ ಎಂದು ಅನಿಸುತ್ತಿದೆ ಈ ಬಗ್ಗೆ ಸುದೀರ್ಘವಾದಂತಹ ಚರ್ಚೆಯಾಗಿ ಇದನ್ನು ಕೊನೆ ಮಾಡಬೇಕೆಂಬುದರ ಬಗ್ಗೆ ನಮಗೆ ತುಂಬಾ ಆಸಕ್ತಿ ಇದೆ. ಮಾನ್ಯ ಸಿದ್ಧರಾಮಣ್ಣನವರೆ, ನಾನು ನಿಮಗೆ ಸಲಹೆಯನ್ನು ಕೊಡುವುದೇನೆಂದರೆ, ಇವತ್ತು ಸನ್ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿರುವ ಹಾಗೆ, ಇಡೀ ದೇಶದಲ್ಲಿ ಈ ಭ್ರಷ್ಟಾಚಾರ ಎನ್ನುವಂತಹ ಒಂದು ವಾತಾವರಣ ನಮ್ಮ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ. ನಮ್ಮ ರಾಜ್ಯ ಮಾತ್ರವಲ್ಲ ಇದು ದೇಶದುದ್ದಕ್ಕೂ ಚರ್ಚೆಯಾಗುತ್ತಿದೆ; ಕೇಂದ್ರ ಮಾತ್ರವಲ್ಲ ಅದಕ್ಕಾಗಿ ನಾನು ಎರಡು ಸಲಹೆಯನ್ನು ಕೊಡುತ್ತೇನೆ. ಇಲ್ಲಿ ಈ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡಿ ಅದಕ್ಕೆ ಪರಿಹಾರವನ್ನು ಹುಡುಕೋಣ. ಎರಡನೆಯದು ಅಪರೂಪಕ್ಕೆ ಒಬ್ಬ ಈ ದೇಶದ ಪ್ರಧಾನಿ ಈ ಬಗ್ಗೆ ಚಿಂತನೆಯನ್ನು ಮಾಡುತ್ತಿರುವಂತಹ ನಮ್ಮ ಭಾರತ ದೇಶ 21ನೇ ಶತಮಾನದ ಭಾರತೀಯರ ಶತಮಾನದಲ್ಲಿ ಇಂತಹ ಘಟನಾವಳಿಗಳಿಂದ ಏನು ಕೆಟ್ಟ ಪರಿಣಾಮವಾಗುತ್ತಿದೆ, ಈ ಬಗ್ಗೆ ಪಕ್ಷಭೇದ ಮರೆತು ಎಲ್ಲಾ ಮುಖ್ಯಮಂತ್ರಿಗಳ ಎಲ್ಲಾ ಪ್ರತಿಪಕ್ಷದ ನಾಯಕರ ಒಂದು ಸಭೆಯನ್ನು ಕರೆದು ಇದಕ್ಕೆ ಶಾಶ್ವತವಾದ ಪರಿಹಾರವನ್ನು ಹುಡುಕುವುದಕ್ಕೆ ನಾವು ಏನು ಮಾಡಬೇಕು, ಈ ಬಗ್ಗೆ ಅವರ ಸಲಹೆ ಏನು, ಈ ಬಗ್ಗೆ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಬೇಕು. ಇದನ್ನು ಕೊನೆ ಮಾಡುವುದರ ಬಗ್ಗೆ ಚರ್ಚೆಯಾಗಲಿ. ಮಾನ್ಯ ಜಯಚಂದ್ರರವರೆ, ಇಲ್ಲಿ ನಾನು ಈ ಬಗ್ಗೆ ಚರ್ಚೆ ಮಾಡುವುದರ ಬಗ್ಗೆ ಅಡ್ಡಿ ಮಾಡುತ್ತಿಲ್ಲ. ಮಾಜಿ ಪ್ರಧಾನ ಮಂತ್ರಿಯಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ನಂತರ ಇತ್ತೀಚಿನ ದಿವಸಗಳಲ್ಲಿ ದೇಶದ ಆಗುಹೋಗುಗಳ ಬಗ್ಗೆ ಕಳಕಳಿ ಇರುವಂತಹ ಒಬ್ಬ ಪ್ರಧಾನ ಮಂತ್ರಿಯವರು ಇರುವಂತಹ ಕಾಲದಲ್ಲಿ ಈ ಘಟನಾವಳಿಗಳನ್ನು ಕೊನೆಗಾಣಿಸುವಂತೆ ಮಾಡಬೇಕು. ಇದು ಎಲ್ಲವೂ ಮುಗಿಯುವುದಿಲ್ಲ, ಎಲ್ಲವೂ ನಿಲ್ಲುವುದಿಲ್ಲ, ಈ ಭ್ರಷ್ಟಾಚಾರವೆಂಬ

ಪೆಡಂಭೂತ ನಮ್ಮನ್ನು ಕಾಡುತ್ತಿದೆ, ಇದು ದೇಶದ ಅಭಿವೃದ್ಧಿಗೆ ಮಾರಕವಾಗಿದೆ, ಇಂತಹ ಸಂದರ್ಭದಲ್ಲಿ ಈ ಬಗ್ಗೆ ಚರ್ಚೆಯಾಗಬೇಕು, ಅದಕ್ಕೆ ಪರಿಹಾರವನ್ನು ಹುಡುಕಬೇಕು, ನಾವು ಒಂದು ಹತ್ತು ಹೆಜ್ಜೆಯಾದರೂ ಮುಂದೆ ಹೋಗಬೇಕು. ಜನರಿಗೆ ಈ ರಾಜ್ಯದ ಆಡಳಿತ ವ್ಯವಸ್ಥೆಯ ಬಗ್ಗೆ ಸವಲತ್ತುಗಳು ಸಿಗಬೇಕೆಂಬುದೇ ನಿಮ್ಮ ಕಳಕಳಿಯಾಗಿದೆ. ಇಂತಹ ಗಂಭೀರವಾದಂತಹ ವಿಷಯಗಳ ಬಗ್ಗೆ ನಾವು ತಮ್ಮ ಹತ್ತಿರ ವಿನಂತಿ ಮಾಡುವುದೇನೆಂದರೆ, ಇವತ್ತು ಏನು ಸತ್ಸಂಪ್ರದಾಯಗಳು ಬಂದಿವೆ, ಒಂದು question hourಗೆ ಒಂದು ಮಹತ್ವವಿದೆ. ಅದು ಆದ ಮೇಲೆ immediate ಆಗಿ ಬೇರೆ ವಿಷಯಗಳನ್ನು ತೆಗೆದುಕೊಳ್ಳದೇ, ಇದೇ ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲಿ. ಇವತ್ತು ಲೋಕಾಯುಕ್ತರ ಬಗ್ಗೆ ಚರ್ಚೆಯನ್ನು ಮಾಡೋಣ. ನಂತರ ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿರುವ ನೈಸ್ ವಿಚಾರದ ಬಗ್ಗೆಯೂ ಕೂಡ ಚರ್ಚೆಯನ್ನು ಮಾಡೋಣ. ಈ ರೀತಿಯಾದ ಎಲ್ಲಾ ವಿಷಯಗಳ ಬಗ್ಗೆ ಮೊದಲನೆಯ ಒಂದು ವಾರ ಎರಡೆರಡು ದಿವಸಗಳ ಕಾಲ ಚರ್ಚೆಯನ್ನು ಮಾಡಿ. ಎಷ್ಟು ಸಮಯ ಬೇಕಾದರೂ ತೆಗೆದುಕೊಳ್ಳಿ, ನಾನು ಕೂಡ ಒಳಗಡೆ ಬರುವುದಿಲ್ಲ. ತಾವು ಅಧ್ಯಕ್ಷರ ಕೊಠಡಿಯಲ್ಲಿ ಕುಳಿತುಕೊಂಡು ಇಂತಿಂತಹ ವಿಷಯಗಳ ಬಗ್ಗೆ ಇಷ್ಟು ದಿವಸಗಳ ಕಾಲ ಸಮಯಬೇಕೆಂದು ತಾವು ಹೇಳಿದರೆ ಅದು ಪೂರ್ಣವಾಗಿ ಚರ್ಚೆಯಾಗಬೇಕು, ಅದಕ್ಕೆ ನಾವು ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಯಾರೋ ಮಾಡಿದ ಪಾಪಕ್ಕೆ ನಾವು ಏತಕ್ಕಾಗಿ ಭಾರವನ್ನು ಹೊತ್ತುಕೊಳ್ಳಬೇಕು? ಇದು ನಿರಂತರವಾಗಿ ನಡೆದುಕೊಂಡು ಬಂದಿರುವಂತಹ ಪ್ರಕ್ರಿಯೆಯಾಗಿದೆ. ನಾನು ಅಧಿಕಾರಕ್ಕೆ ಬಂದು ನಿನ್ನೆ ಮೊನ್ನೆಯಾಗಿದೆ. ಲೋಕಾಯುಕ್ತರು ಇವತ್ತಲ್ಲಾ ಬಂದಿರುವಂತಹದ್ದು, ಇವತ್ತು ದೇಶದಲ್ಲಿಯೇ ಒಬ್ಬ ರಾಜಕೀಯ ಮುತ್ಸದ್ದಿ ಎನಿಸಿಕೊಂಡಂತಹ ಶ್ರೀ ರಾಮಕೃಷ್ಣ ಹೆಗಡೆಯವರು ತಂದಂತಹ ಒಂದು ಮಸೂದೆ ಇದಾಗಿದೆ. ಆ ಬಗ್ಗೆಯೇ ಕೊಟ್ಟಂತಹ Suomotu ಅಧಿಕಾರವನ್ನು ಅವರು ವಾಪಸ್ಸು ತೆಗೆದುಕೊಂಡರು. ಇದು ಅಲ್ಲಿಂದ ಚರ್ಚೆಯಾಗಬೇಕಾಗುತ್ತದೆ. ಈ ಬಗ್ಗೆ ನಾವು ಯಾರೂ ಕೂಡ ಹಿಂದೆ ಮುಂದೆ ನೋಡುತ್ತಿಲ್ಲ. ಆ ಕಾಲದಲ್ಲಿ ನೀವೆಲ್ಲರೂ ಇದ್ರಿ, ನೀವು ಯಾರೂ ಕೂಡ ಅದಕ್ಕೆ ಗಟ್ಟಿಯಾಗಿ ನಿಂತುಕೊಳ್ಳಲಿಲ್ಲ.

ಇವತ್ತು ಏತಕ್ಕಾಗಿ ನಮ್ಮ ಮೇಲೆ ಬೆಟ್ಟು ತೋರಿಸುತ್ತಿದ್ದೀರಿ? ನಾನು ಈ ಬಗ್ಗೆ ರೆಡಿ ಇದ್ದೇನೆ. ನಾನು ಒಂದು ಮಾತನ್ನು ಈ ಮನೆಯಲ್ಲಿ ಹೇಳಿದ್ದೇನೆ. ಯಾವುದೇ ವಿಷಯದ ಬಗ್ಗೆ ಚರ್ಚೆ ಮಾಡಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಇದಕ್ಕೆ ನಾವೆಲ್ಲರೂ ಪರಿಹಾರವನ್ನು ಹುಡುಕೋಣ. ನಾಡಿನ ಜನರು ಗೌರವದಿಂದ ಬದುಕಬೇಕು. Global Investors Meetನಿಂದಾಗಿ ಇಡೀ ಜಗತ್ತು ನಮ್ಮ ಕಡೆ ನೋಡುತ್ತಿರುವಂತಹ ಸಮಯದಲ್ಲಿ ನಾವು–ನಾವೇ ಕೆಸರನ್ನು ಚೆಲ್ಲಿಕೊಂಡು, ರಾಜ್ಯದ ಬಗ್ಗೆ ಕೆಟ್ಟ ಅಭಿಪ್ರಾಯ ಬರುವುದರಿಂದ ನೀವು ಏನು ಸಾಧನೆ ಮಾಡಿದಂತಾಗುತ್ತದೆ? ಆ ಬಗ್ಗೆ ಅಂಕಿಅಂಶಗಳೊಂದಿಗೆ ಚರ್ಚೆಯನ್ನು ಮಾಡೋಣ. ಎಲ್ಲಾ ವಿಷಯದ ಬಗ್ಗೆ ಚರ್ಚೆಯನ್ನು ಮಾಡೋಣ. ಆದರೆ ಎರಡೆರಡು ದಿವಸಗಳ ಕಾಲ ಚರ್ಚೆ ಮಾಡಿ ಎಂದು ನಾನು ಬಹಳ ವಿನಯದಿಂದ ನಿಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ. ಅಧಿವೇಶನ ಆದಮೇಲೆ ಇಲ್ಲಿ ಚರ್ಚೆಯಾಗಲಿಲ್ಲವೆನ್ನುವಂತಹ ಅನೇಕ ಆರೋಪಗಳನ್ನು ಮಾನ್ಯ ರೇವಣ್ಣನವರಿಂದ ಮತ್ತು ಬೇರೆಯವರಿಂದ ಕೇಳಿದ್ದೇನೆ. ಈ ಮಾತುಗಳನ್ನು ನಾನು ಕೇಳುವುದಕ್ಕೆ ಸಿದ್ಧನಿಲ್ಲ. ನೀವು ಇಂತಹ ಪ್ರಮುಖವಾದಂತಹ ವಿಷಯಗಳ ಬಗ್ಗೆ ಎರಡೆರಡು ದಿವಸಗಳ ಕಾಲ ಸಮಯ ನಿಗದಿ ಮಾಡಿ. ಅದು ಇಲ್ಲಿ ಚರ್ಚೆಯಾಗಲಿ. Question hour ಬೇಕೋ ಅಥವಾ ಬೇಡವೋ ಎಂದು ನೀವು ನಿರ್ಧಾರವನ್ನು ಮಾಡಿ. ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಕೊಠಡಿಗೆ ಕರೆಯಿರಿ, ಇನ್ನು 5 ದಿವಸಗಳ ಕಾಲ Question hour ಇಲ್ಲವೆಂದು ಹೇಳಿ. ಆಗ ಈ ವಿಷಯಗಳ ಬಗ್ಗೆ ಚರ್ಚೆಯಾಗಲಿ. we are ready. ಆದರೆ ಇಲ್ಲಿರುವಂತಹ ಸತ್ಸಂಪ್ರದಾಯವನ್ನು ಗಾಳಿಗೆ ತೂರಿ ಮೊದಲನೆಯ ದಿವಸವೇ Question hourನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕು ಎಂದರೆ ಇದು ಎಷ್ಟರಮಟ್ಟಿಗೆ ಸಮಂಜಸ ಎನ್ನುವುದನ್ನು ಮಾನ್ಯ ಪ್ರತಿಪಕ್ಷದ ನಾಯಕರೇ ಹೇಳಬೇಕು ಸ್ವಾಮಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ದೇಶದಲ್ಲಿ ಭ್ರಷ್ಟಾಚಾರವನ್ನು ತೆಗೆದು ಹಾಕಲಿಕ್ಕೆ ಏನೇನು ಸಾಧ್ಯವಿದೆಯೋ ಅದೆಲ್ಲವನ್ನು ಮಾಡೋಣ, ಏನೇನು ಬದಲಾವಣೆ

ತರಲಿಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನು ತರೋಣ, ಏನೇನು ಕಾನೂನುಗಳನ್ನು ತರಲಿಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನು ತರೋಣ, ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡೋಣವೆಂದು ಹೇಳುತ್ತಾರೆ. " ನಾನು ಮುಖ್ಯ ಮಂತ್ರಿಯಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವುದೇ ನನ್ನ ಮೊದಲನೆ ಕರ್ತವ್ಯ" ಎಂದು ಇವರು ಅಧಿಕಾರಕ್ಕೆ ಬಂದಾಗಲೇ ದೆಹಲಿಯಲ್ಲಿ ಒಂದು ಬಾರಿ ಹೇಳಿದ್ದರು. ಹಾಗಾದರೆ ಲೋಕಾಯುಕ್ತರು ಮಾಡುತ್ತಿದ್ದ ಕೆಲಸ ಏನು ಸ್ವಾಮಿ? ನನಗೆ ಬೆರಳು ತೋರಿಸುತ್ತಿದ್ದೀರಿ ಎಂದು ಹೇಳುತ್ತಾರೆ, ಇವತ್ತು ರಾಮಕೃಷ್ಣ ಹೆಗಡೆ, ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾರೆಯೇ, ಎಸ್.ಎಂ.ಕೃಷ್ಣರವರು ಆ ಸ್ಥಾನದಲ್ಲಿ ಕುಳಿತಿದ್ದಾರೆಯೇ? ಜೆ.ಹೆಚ್.ಪಟೇಲ್, ದೇವೇಗೌಡರು ಮುಖ್ಯಮಂತ್ರಿಯಾಗಿ ಕುಳಿತಿದ್ದಾರೆಯೇ? You are sitting as chief minister. ಇವತ್ತು ನಿಮ್ಮ ಕಾಲದಲ್ಲಿ ಅವರು ರಾಜೀನಾಮೆ ಕೊಟ್ಟಿರುವುದು. ಅವರು ನಿಮ್ಮ ಸರ್ಕಾರಕ್ಕೆ ಕಪಾಳಮೋಕ್ಷ ಮಾಡಿರುವುದು No Lokayukta has resigned in any Government. Why? Because nobody was pained. ನೀವು ಏನು ಇವತ್ತು ಅವರಿಗೆ ನೋವು ಉಂಟು ಮಾಡಿದ್ದೀರಿ, ಅವರಿಗೆ ಮಾನಸಿಕವಾಗಿ ತೊಂದರೆ ಕೊಟ್ಟಿದ್ದೀರಿ, ಆ ರೀತಿ ತೊಂದರೆಯನ್ನು ಯಾರೂ ಕೊಟ್ಟಿರಲಿಲ್ಲ. ಇದನ್ನು ನಾನು ಹೇಳುತ್ತಿಲ್ಲ, ಲೋಕಾಯುಕ್ತರವರು ಇಪ್ಪತ್ತು ಸಾರಿ ಹೇಳಿದ್ದಾರೆ. ಎಲ್ಲಾ ಪತ್ರಿಕೆಗಳನ್ನು ತೆಗೆದು ಓದಿ" ನಾನು ನೊಂದಿದ್ದೇನೆ, ಬೇಸತ್ತಿದ್ದೇನೆ. ನನಗೆ ಸರ್ಕಾರ ಅಸಹಕಾರ ತೋರಿಸಿತು, ನನಗೆ ಮಾನಸಿಕವಾಗಿ ತೊಂದರೆಯಾಯಿತು. ಅದನ್ನು ಇವತ್ತೇ ಹೇಳಿಲ್ಲ, ಕಳೆದ ಎರಡು ತಿಂಗಳುಗಳಿಂದ ರಾಜಿನಾಮೆ ಕೊಡಬೇಕೆಂದು ಇದ್ದೆ, ಇವತ್ತು ತೀರ್ಮಾನ ಮಾಡಿರುವುದು ಅಲ್ಲ. . .

(ಗೊಂದಲ)

ಅಧ್ಯಕ್ಷರು: ವಿಷಯಾಂತರ ಬೇಡ, please

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಹಲವು ಮಾನ್ಯ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವತ್ತು ಇವರು ಹೇಳಬಹುದಾಗಿತ್ತು, "ನಾನು ಅವರನ್ನು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುವುದಿಲ್ಲ. ಅವರಿಗ ಮುಜುಗರವಾಗಬಹುದು." ಎಂದು ಅವರು ರಾಜೀನಾಮೆ ಕೊಟ್ಟ ಮೇಲೆ ಇವರೇ ವ್ಯಂಗ್ಯವಾಗಿ ಹೇಳಿದ್ದಾರೆ. It is this Government which created an atmosphere, situation which made Mr. Santhosh Hegde to resign.

ಅಧ್ಯಕ್ಷರು: ಚರ್ಚೆಗೆ ಮುನ್ನ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣವೇ ಅಥವಾ ನಂತರವೇ ಎಂದು ಹೇಳಬೇಕು.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ವೈಯಕ್ತಿಕವಾಗಿ ಅವರು ರಾಜೀನಾಮೆ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈಗ ಪ್ರಶ್ನೋತ್ತರದ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎಸ್. ಸಿದ್ದರಾಮಯ್ಯ: ಅವರು ಅಲ್ಲೇನು ಮಾಡುತ್ತಿದ್ದರು? ಇದಕ್ಕೆ ಮುನ್ನ ರಾಜ್ಯದಲ್ಲಿ ಇಷ್ಟು ಜನ ಲೋಕಾಯುಕ್ತರಾಗಿದ್ದರು?ಮಾನ್ಯ ಕೋಶಲ್ ಇದ್ದರು, ಮಾನ್ಯ ಹಕೀಂ ಇದ್ದರು ಮಾನ್ಯ ವೆಂಕಟಾಚಲ ಇದ್ದರು, ಅವರ್ಯಾರೂ ಕೂಡ ರಾಜೀನಾಮೆಯನ್ನು ಕೊಟ್ಟಿರಲಿಲ್ಲ.it is justice santosh Hegde ಅವರು ರಾಜೀನಾಮೆಯನ್ನು ಕೊಟ್ಟಿರುವುದು

ಶ್ರೀ ಬಿ. ಎನ್. ಬಚ್ಚೇಗೌಡ : ವೈಯಕ್ತಿಕವಾಗಿ ಅವರು ರಾಜೀನಾಮೆ

(ಗೊಂದಲ)

ಶ್ರೀ ಎಸ್. ಸಿದ್ದರಾಮಯ್ಯ: why he has resigned? Who made him to resign? ಅಧ್ಯಕ್ಷರೆ, ದಯಮಾಡಿ ನನಗೆ ಈ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಆಮೇಲೆ ಸರ್ಕಾರ ಅದಕ್ಕೆ ಉತ್ತರ ಏನು ಹೇಳುತ್ತದೋ ಆಮೇಲೆ ಹೇಳಲಿ.

ಅಧ್ಯಕ್ಷರು: ಈಗ ಈ ಚರ್ಚೆ ಪ್ರಶ್ನೋತ್ತರ ಆದ ಮೇಲೆಯೇ ಅಥವಾ ನಂತರವೋ ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ: ದಯಮಾಡಿ ಪ್ರಶ್ನೋತ್ತರವನ್ನು ಬದಿಗಿಟ್ಟು ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ನನ್ನದೊಂದು ವಿನಂತಿ ಇದೆ, ಪ್ರಶ್ನೋತ್ತರ ಆದ ತಕ್ಷಣ ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್ ಡಿ ರೇವಣ್ಣ: ಅಧ್ಯಕ್ಷರೆ, ಪ್ರಶ್ನೋತ್ತರಕ್ಕೆ ಮೊದಲೇ ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನಿಮಗೂ ಸಹ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಇದನ್ನು ಪ್ರಶ್ನೋತ್ತರ ಆದ ತಕ್ಷಣ ತೆಗೆದುಕೊಳ್ಳೋಣ.

Sri Siddaramaiah: There is Constitutional crisis.

ಶ್ರೀ ಹೆಚ್. ಡಿ. ರೇವಣ್ಣ: ಇವತ್ತು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ.

Sri Siddaramaiah: Why I am insisting is because there is constitutional crisis. The Democratic institution has collapsed

(ಗೊಂದಲ)

ಅಧ್ಯಕ್ಷರು: ಈ Adjournment motion merit ಬಗ್ಗೆ ಈಗ ನಾನು ಎನೂ ಮಾತನಾಡುವುದಿಲ್ಲ.

Sri B. N. Bache Gowda: There is no constitutional crisis. ಇದು Constitutional crisis ಅಲ್ಲ. It is a creation of Legislature of the State. It is not a constitutional matter.

Sri C. C. Patil: There is no Constitutional crisis at all.

Sri Siddaramaiah: You will have your chance. ಆಗ ಹೇಳಿ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಶ್ರೀ ಎಸ್.ಆರ್.ಮಹೇಶ್, ಪ್ರಶ್ನೆಯನ್ನು ಕೇಳಿ. ಬಚ್ಚೇಗೌಡರೆ, ಕುಳಿತುಕೊಳ್ಳಿ, ನೀವು ಆಮೇಲೆ ಹೇಳಿ, ಪ್ಲೀಸ್.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ನಮಗೆ ಈ ರೀತಿ ಮಾಡಿ, ರಕ್ಷಣೆ ಕೊಡದೇ ಹೋದರೆ ಬಹಳ ಕಷ್ಟವಾಗಿಬಿಡುತ್ತದೆ. ನೀವು ನಗುತ್ತಿದ್ದೀರಿ. ನಮಗೆ ಇಲ್ಲಿ ಸಂಕಟವಾಗುತ್ತಿದೆ.

ಅಧ್ಯಕ್ಷರು:ಏನೂ ಇಲ್ಲ, ಎಲ್ಲರೂ ನಗೋಣ.

2. **ಪ್ರಶ್ನೋತ್ತರ:**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ಉತ್ತರಗಳು.

ಕೆಟ್ಟಿರುವ ಟ್ರಾನ್ಸ್‌ಫಾರ್ಮರ್‌ಗಳ ಮಾಹಿತಿ ಬಗ್ಗೆ.

16 (95) ಶ್ರೀ ಎಸ್. ಆರ್. ಮಹೇಶ್ (ಕೃಷ್ಣರಾಜ ನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಹಾಗೂ ಹಾಸನ ಜಿಲ್ಲೆಗಳ ಬೆಸ್ಕಾಂ ವಿದ್ಯುಚ್ಛಕ್ತಿ ಮಂಡಳಿಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ಕೆಟ್ಟಿರುವ ಟ್ರಾನ್ಸ್‌ಫಾರ್ಮರ್‌ಗಳ (ಟಿ.ಸಿ) ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು).

ಆ) ದುರಸ್ತಿಗೊಳಪಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು (ಟಿ.ಸಿ) ಸರಿಪಡಿಸಲು ತೆಗೆದುಕೊಳ್ಳುವ ಸಮಯಾವಕಾಶವೆಷ್ಟು ಹಾಗೂ ನಿಯಮಾನುಸಾರ ಎಷ್ಟು ದಿನಗಳಲ್ಲಿ ದುರಸ್ತಿ ಪಡಿಸಿ ವಿದ್ಯುಚ್ಛಕ್ತಿಯ ಸಂಪರ್ಕವನ್ನು ನೀಡಲಾಗುವುದು?

ಇ) ಕೆ.ಆರ್. ನಗರ ಹಾಗೂ ಸಾಲಿಗ್ರಾಮ ಉಪ ವಿಭಾಗ ವ್ಯಾಪ್ತಿಯಲ್ಲಿ ಹಲವಾರು ಸಮಯದಿಂದ ಕೆಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು (ಟಿ.ಸಿ) ದುರಸ್ತಿಗೊಳಿಸದಿರುವುದರಿಂದ ರೈತರಿಗೆ ಹಾಗೂ ನಾಗರೀಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?